**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 8/2024**

**ಪಿ.ಡಬ್ಲು:6 ಸಿಡಬ್ಲು:12**

ಸಾಕ್ಷಿಯ ಹೆಸರು : ಅಂಜಿನಪ್ಪ

ತಂದೆಯ ಹೆಸರು : ಲೇಟ್ ಓಬಯ್ಯ

ವಯಸ್ಸು : 61 ವರ್ಷ

ವೃತ್ತಿ : ವ್ಯವಸಾಯ

ವಾಸಸ್ಥಳ : ಬಂಡ್ರಿ ಗ್ರಾಮ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: **04-12-2024**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

ಆರೋಪಿ ನನಗೆ ಅಳಿಯನಾಗಬೇಕು. ಮೃತ ಹುಲೆಮ್ಮ ನನಗೆ ತಂಗಿಯಾಗಬೇಕು. ಅವರಿಗೆ 4 ಜನ ಮಕ್ಕಳು . ಎರಡು ಗಂಡು ಮತ್ತು ಎರಡು ಹೆಣ್ಣು ಮಕ್ಕಳು ಇದ್ದಾರೆ. ಅವರುಗಳು ಚಾಸಾ-7, 13, ಆಕಾಶ್ ಮತ್ತು ಪ್ರಕಾಶ್ ಆಗಿರುತ್ತಾರೆ. ಚಾಸಾ-7 ರವರಿಗೆ ಮದುವೆ ಆಗಿಲ್ಲ. ಅವಳು ತನ್ನ ತಂದೆ ತಾಯಿ ಜೊತೆ ವಾಸ ಇದ್ದಳು. ನನ್ನ ತಂಗಿ ಈಗ ಜೀವಂತ ಇಲ್ಲ. ನನ್ನ ತಂಗಿ ತನ್ನ ಮನೆಯಲ್ಲಿ ಈಗ ಸುಮಾರು ಒಂದು ವರ್ಷದ ಹಿಂದೆ ಮರಣ ಹೊಂದಿದ್ದಳು. ಹುಲೆಮ್ಮನ ಮಕ್ಕಳು ನಮಗೆ ಫೋನ್ ಮಾಡಿ ತನ್ನ ತಾಯಿ ಮರಣ ಹೊಂದಿರುವ ಬಗ್ಗೆ ತಿಳಿಸಿದರು. ನನಗೆ ಫೋನ್ ಮಾಡಿದವರ ಹೆಸರು ನೆನಪಿಲ್ಲ. ತನ್ನ ತಾಯಿ ನೇಣುಹಾಕಿಕೊಂಡು ಮರಣ ಹೊಂದಿದ್ದಳು ಎಂದು ತಿಳಿಸಿದರು. ಯಾವ ಕಾರಣಕ್ಕಾಗಿ ನೇಣು ಹಾಕಿಕೊಂಡಿದ್ದಳು ಎಂದು ತಿಳಿಸಿಲ್ಲ. ಪೊಲೀಸರ ಮುಂದೆ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).

<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>

ದಿಃ **28-11-2023** ರಂದು ನಾನು ಈ ಪ್ರಕರಣದಲ್ಲಿ ಪೊಲೀಸರ ಮುಂದೆ ನನಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು --------------- ನನಗೆ ಮಾಹಿತಿ ತಿಳಿದಿರುತ್ತದೆ " ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ನಾನು ನಿಪಿ-6 ರಂತೆ ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಮತ್ತು ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಆರೋಪಿಯೂ ನನ್ನ ಅಳಿಯನಾಗಿರುವುದರಿಂದ ಆತನಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು ಆರೋಪಿ ಪರ ವಕೀಲರಿಂದಃ</u>

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.